
# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003


ಸಂಪುಟ - 15 Reg. No. : KARBIL / 2005 / 16123 ಮಾರ್ಚ್ - 2026 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 03 ಪ್ರಕಟಣೆ : 30-03-2026


## ಪೊಳಲಿಯಲ್ಲಿ ಆಯುರ್ವೇದ ಭೂಷಣ ಡಾ। ಎಂ. ವೆಂಕಟೇಶ ಶಾಸ್ತ್ರಿ ಸ್ಮಾರಕ ವೆಲ್‌ನೆಸ್ ಸೆಂಟರ್‌ನ ಶಿಲಾನ್ಯಾಸ





ಶ್ರೀ ಸುಬ್ರಹ್ಮಣ್ಯ ಸಭಾ ಮತ್ತು ಶ್ರೀ ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್‌ನ ಪದಾಧಿಕಾರಿಗಳು ಮತ್ತು ಸದಸ್ಯರು, ತಾರೀಕು **19-03-2026**ನೇ ಗುರುವಾರ ಪೊಳಲಿಯ ನಿವೇಶನದಲ್ಲಿ ಆಯುರ್ವೇದ ಭೂಷಣ ಡಾ। ಎಂ. ವೆಂಕಟೇಶ ಶಾಸ್ತ್ರಿ ಸ್ಮಾರಕ ವೆಲ್‌ನೆಸ್ ಸೆಂಟರ್ (ಆಯುರ್ವೇದ ಚಿಕಿತ್ಸಾಲಯ) ಪ್ರಾರಂಭಿಸಲು ಕಟ್ಟಡ ಶಿಲಾನ್ಯಾಸದ ಪೂರ್ವಭಾವಿಯಾಗಿ ಶೃಂಗೇರಿ ಜಗದ್ಗುರುಗಳ ಆಶೀರ್ವಾದ ಪಡೆಯಲು ತೆರಳಿದ್ದು, ಜಗದ್ಗುರುಗಳು ಆಶೀರ್ವದಿಸಿ ದಯಪಾಲಿಸಿದ ಶಿಲೆಗಳನ್ನು ತಾ. **20-03-2026**ನೇ ಶುಕ್ರವಾರ ಪೊಳಲಿ ನಿವೇಶನದಲ್ಲಿ ಜರಗಿದ ಶಿಲಾನ್ಯಾಸ ಸಮಾರಂಭದಲ್ಲಿ, ಶ್ರೀ ಪ್ರದೀಪ್ ಕುಮಾರ್ ಪಂಜ, ಅಧ್ಯಕ್ಷರು, ಕರ್ಣಾಟಕ ಬ್ಯಾಂಕ್ ಇವರು ತಮ್ಮ ಅಮೃತಹಸ್ತದಿಂದ ಶಿಲಾನ್ಯಾಸವನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ, ಪ್ರಾಂತೀಯ ಧರ್ಮಾಧಿಕಾರಿಗಳು, ಶ್ರೀ ಶೃಂಗೇರಿ ಶಾರದಾ ಪೀಠಂ, ಆಶೀರ್ವಚನ ನೀಡಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಡಾ. ಸಂತೋಷ್ ಕುಮಾರ್ ಶಾಸ್ತ್ರಿ ಮತ್ತು ಶ್ರೀಮತಿ ಕವಿತಾ ಶಾಸ್ತ್ರಿಯವರು ಯೋಜನೆಗೆ ಶುಭಹಾರೈಸಿದರು.

ಡಾ। ಎ. ಪಿ. ಕೃಷ್ಣ, ಅಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಸಭಾ, ಅತಿಥಿಗಳನ್ನು ಮತ್ತು ಸೇರಿದ ಸದಸ್ಯರನ್ನು ಸ್ವಾಗತಿಸಿದರು. ಶ್ರೀ ಕರುಣ್ ರಾವ್ ಬೆಳ್ಳೆಯವರು, ಶಿಲಾನ್ಯಾಸಗೈದ ಶ್ರೀ ಪ್ರದೀಪ್ ಕುಮಾರ್ ಪಂಜ, ಶ್ರೀಮತಿ ಪದ್ಮಾವತಿ ಮತ್ತು ಆಯುರ್ವೇದ ಭೂಷಣ ಡಾ। ಎಂ. ವೆಂಕಟೇಶ ಶಾಸ್ತ್ರಿ, ಎಜುಕೇಶನ್ ಟ್ರಸ್ಟ್‌ನ ಗೌರವಾಧ್ಯಕ್ಷರಾದ ಡಾ. ಸಂತೋಷ ಕುಮಾರ್ ಶಾಸ್ತ್ರಿ ಮತ್ತು ಟ್ರಸ್ಟ್‌ನ ಅಧ್ಯಕ್ಷೆ ಶ್ರೀಮತಿ ಕವಿತಾ ಶಾಸ್ತ್ರಿಯವರಿಗೆ ತುಂಬುಹೃದಯದ ಧನ್ಯವಾದಗಳನ್ನು ಅರ್ಪಿಸಿದರು. ಈ ಯೋಜನೆಯ ಆರ್ಕಿಟೆಕ್ಟ್ ಆಗಿ ಸಹಕರಿಸುತ್ತಿರುವ ಪೈಲ್ಯಾಂಡ್ಸ್ ಅಸೋಸಿಯೇಟ್‌ನ ಶ್ರೀ ವೆಂಕಟೇಶ್ ಪೈ ಮತ್ತು ಹಿರಿಯ ಇಂಜಿನಿಯರ್ ಶ್ರೀ ಮುರಳೀಧರ ರಾವ್ ಇವರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಅಲ್ಪಾವಧಿಯ ಸಮಯಾವಕಾಶದಲ್ಲಿ ನಡೆದ ಈ ಸಮಾರಂಭಕ್ಕೆ ಆಗಮಿಸಿದ ಸಹೃದಯಿ ಸಮಾಜ ಬಾಂಧವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಪಿ. ಉದಯಕುಮಾರ್ ಧನ್ಯವಾದಗಳನ್ನು ಸಮರ್ಪಿಸಿದರು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್




ನಮ್ಮ ಪುತ್ರ ಚಿ। **ಸುಹಾಸ್** ಮತ್ತು
ಶ್ರೀ ರಾಜೇಶ್ ವಿಟ್ಲ ಹಾಗೂ ಶ್ರೀಮತಿ ವಿದ್ಯಾ ಇವರ ಪುತ್ರಿ
**ಚಿ। ಸೌ। ವರ್ಷಿಣಿ**
ವಿವಾಹ ಮಹೋತ್ಸವವು ತಾ. 12-03-2026ನೇ ಗುರುವಾರ ಮತ್ತು
ಆರತಕ್ಷತೆ ಸಮಾರಂಭವು ತಾ. 13-03-2026ನೇ ಶುಕ್ರವಾರ ಮಂಗಳೂರು 'ಸಂಘನಿಕೇತನ'ದಲ್ಲಿ
ನಡೆದಿದ್ದು, ಕಾರ್ಯಕ್ರಮಕ್ಕೆ ಆಗಮಿಸಿ, ನೂತನ ವಧೂವರರನ್ನು ಹರಸಿ, ಆಶೀರ್ವದಿಸಿದ
ಬಂಧು-ಬಾಂಧವರಿಗೆ ಹಾಗೂ ಹಿತೈಷಿಗಳಿಗೆ ಹಾರ್ದಿಕ ವಂದನೆಗಳು.

ಪಿ. ಶ್ರೀಕಾಂತ್ ರಾವ್ ಮತ್ತು ಶೈಲಜಾ ಎಸ್. ರಾವ್ ಹಾಗೂ ಕು। ಸಿಂಚನ, ಮಂಗಳೂರು

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಬಿಜೈ ರಸ್ತೆ, ಮಂಗಳೂರು





ಸಮಾಜ ಬಾಂಧವರೇ,

ದಿನಾಂಕ **05-04-2026**ನೇ ರವಿವಾರ
**ಶ್ರೀ ಸಭಾದ ವತಿಯಿಂದ**
ಶ್ರೀ ಶ್ರೀ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ
**ವರ್ಧಂತ್ಯುತ್ಸವ ಹಾಗೂ ಶ್ರೀ ರಾಮನವಮಿ ಕಾರ್ಯಕ್ರಮಗಳನ್ನು**
ಶ್ರೀ ಸುಬ್ರಹ್ಮಣ್ಯ ಸಭಾಸದನದಲ್ಲಿ ಆಚರಿಸಲಾಗುವುದು.
ಆ ಪ್ರಯುಕ್ತ ಶ್ರೀರಾಮ ದೇವರಿಗೆ ಕಲ್ಪೋಕ್ತ ಪೂಜೆ ನಡೆಯಲಿದೆ.
ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಅಧ್ಯಕ್ಷರು ಹಾಗೂ ಸರ್ವ ಸದಸ್ಯರು

### ಕಾರ್ಯಕ್ರಮಗಳು

ಬೆಳಗ್ಗೆ ಗಂಟೆ 7-30 : ಪಾರಾಯಣ
ಬೆಳಗ್ಗೆ ಗಂಟೆ 8-30 : ಉಪಾಹಾರ
ಬೆಳಗ್ಗೆ ಗಂಟೆ 9-00 : ಶ್ರೀ ಶಾರದಾಂಬ ಭಜನಾ ಮಂಡಳಿ ಇವರಿಂದ ರಾಮ ರಕ್ಷಾ ಸ್ತೋತ್ರ, ಹನುಮ ಸ್ತೋತ್ರ ಸಹಿತ 'ಭಜನಾ ಕಾರ್ಯಕ್ರಮ'
ಬೆಳಗ್ಗೆ ಗಂಟೆ 10-30 : ಶ್ರೀ ರಾಮದೇವರಿಗೆ ಕಲ್ಪೋಕ್ತ ಪೂಜೆ
ಶ್ರೀಗುರುಗಳ ಬಗ್ಗೆ ಪ್ರವಚನ
ಶ್ರೀ ಕರುಣ್ ರಾವ್ ಬೆಳ್ಳೆ, ಸಂಚಾಲಕರು
ಶ್ರೀ ಶಾಂಕರತತ್ತ್ವ ಪ್ರಸಾರ ಅಭಿಯಾನ, ಮಂಗಳೂರು - ಇವರಿಂದ
ಮಧ್ಯಾಹ್ನ ಗಂಟೆ 12-30 : ಪ್ರಸಾದ ಭೋಜನ

ಕಾರ್ಯಕ್ರಮದ ಪ್ರಾಯೋಜಕರು : ಶ್ರೀಮತಿ ಸ್ನೇಹಲತಾ ದಿವಾಕರ್ ಹಾಗೂ ಡಾ. ದಿವಾಕರ್ ರಾವ್, ಮಂಗಳೂರು

# ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು
9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ :

• ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು

• ಟಿ.ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :

• ಉದಯ ಕುಮಾರ್ ಪಿ. • ಸಂತೋಷ್ ಕುಮಾರ್ ಯು.
• ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು :

• ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಡಾ. ಎ. ಪಿ. ಕೃಷ್ಣ

: 7795116598 ✆ : 9343361618
e-mail : jnanashakthisss@gmail.com


# ಅನುಗ್ರಹ ಸಂದೇಶ



ಭಗವದ್ಗೀತೆಯಲ್ಲಿ ಭಗವಂತನು ಮಾನವರಲ್ಲಿರುವ ದೈವೀಕ ಸ್ವಭಾವದವರನ್ನೂ ಮತ್ತು ರಾಕ್ಷಸ ಪ್ರವೃತ್ತಿಯವರನ್ನೂ ವಿವರಿಸಿದ್ದಾನೆ.

ದೈವೀಕ ಸ್ವಭಾವವು ಜನನ ಮತ್ತು ಮರಣದ ಚಕ್ರದಿಂದ ಪಾರು ಮಾಡುತ್ತದೆ. ಆಸುರೀ ಸ್ವಭಾವವು ಬಂಧನದಲ್ಲಿ ಸಿಲುಕಿಸುವುದು. ಈ ಎರಡೂ ಸ್ವಭಾವಗಳನ್ನು ವಿವರವಾಗಿ ತಿಳಿಸಲಾಗಿದೆ.

ದೈವೀಕ ಗುಣ, ಸ್ವಭಾವಗಳನ್ನು ಉಳ್ಳವರು –

***ಅಹಿಂಸಾ ಸತ್ಯಮಕ್ರೋಧಃ ತ್ಯಾಗಃ ಶಾಂತಿರಪೈಶುನಮ್ ।***
***ದಯಾ ಭೂತೇಷ್ವಲೋಲುಪ್ತ್ವಂ ಮಾರ್ದವಂ ಹ್ರೀರಚಾಪಲಮ್ ॥***
***ತೇಜಃ ಕ್ಷಮಾ ಧೃತಿಃ ಶೌಚಮದ್ರೋಹೋ ನಾತಿಮಾನಿತಾ ।***
***ಭವಂತಿ ಸಂಪದಂ ದೈವೀಮಭಿಜಾತಸ್ಯ ಭಾರತ ॥***

ಅಹಿಂಸೆ, ಸತ್ಯ, ಕೋಪಗೊಳ್ಳದೇ ಇರುವುದು, ವಿರಕ್ತಿ, ಸ್ಥಿರತೆ, ವ್ಯರ್ಥ ಚರ್ಚೆಯನ್ನು ಮಾಡದೇ ಇರುವುದು, ದಯೆ, ಸೌಮ್ಯತೆ, ನಿಷಿದ್ಧ ಕರ್ಮಗಳಲ್ಲಿ ತೊಡಗದಿರುವುದು, ದುರಾಸೆ ಇಲ್ಲದಿರುವುದು, ಘನತೆ, ತೇಜಸ್ಸು, ಶಾಂತಿ, ಚುರುಕುತನ, ಸ್ವಚ್ಛತೆ, ನಿಷ್ಠೆ, ಮಾನವೀಯತೆ – ಇವು ದೈವೀ ಸ್ವಭಾವದ ಸಾತ್ವಿಕರಿಗೆ ಇರುತ್ತವೆ.


ದುಷ್ಟ ಸ್ವಭಾವವಿರುವವರು

***ದಂಭೋ ದರ್ಪೋಽತಿಮಾನಶ್ಚ ಕ್ರೋಧಃ ಪಾರುಷ್ಯಮೇವ ಚ ।***
***ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದಮಾಸುರೀಮ್ ॥***

ದರ್ಪ, ಅಹಂಕಾರ, ಕೋಪ, ಕರ್ಕಶತೆ ಮತ್ತು ಅಜ್ಞಾನ ಇವು ರಾಕ್ಷಸೀ ಸ್ವಭಾವದವರ ಗುಣಗಳಾಗಿರುತ್ತವೆ.

ಇವುಗಳಿಂದ ಮನುಷ್ಯರು ಯಾವ ಗುಣಗಳನ್ನು ತ್ಯಜಿಸಬೇಕು ಹಾಗೂ ಯಾವ ಗುಣ ಸ್ವಭಾವಗಳನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿದು ಬರುತ್ತವೆ. ಭಗವಂತನು, ***"ದೈವೀ ಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಾ"*** ಎಂದು ಅಪ್ಪಣೆ ಕೊಡಿಸಿರುವನು. ದೈವೀ ಸ್ವಭಾವದಿಂದ ಮುಕ್ತಿಯೂ, ಅಸುರೀ ಸ್ವಭಾವದಿಂದ ಬಂಧನವೂ ಆಗುವುದೆಂದು ತಿಳಿದುಕೊಳ್ಳಬೇಕು.

# ಅಪಾರಕೀರ್ತಿ ಗಳಿಸಿ



ಪ್ರತಿಷ್ಠಿತ ಮಾಹೆ ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಸಂಸ್ಥೆಯ ಕುಲಪತಿಗಳಾಗಿ ಪ್ರಸಿದ್ಧ ವೈದ್ಯರಾದ **ಡಾ. ಕಾರ್ಕಳ ಶರತ್ ರಾವ್** ಅವರು ನಿಯೋಜಿತರಾಗಿದ್ದಾರೆ.

●●●



**ಕು। ಸುಷ್ಮಾ ರಾವ್ ಕೆ.** ಅವರು ಡಿಸೆಂಬರ್ 2025ರಲ್ಲಿ ನಡೆದ ಕಂಪನಿ ಸೆಕ್ರೆಟರಿ (CS) ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಅಖಿಲ ಭಾರತ ಮಟ್ಟದಲ್ಲಿ 21ನೇ ಸ್ಥಾನವನ್ನು ಗಳಿಸಿದ್ದಾರೆ. ಅವರು ಚಿಕ್ಕಮಗಳೂರಿನ ಕಳಮೆ ಶ್ರೀ ಲಕ್ಷ್ಮೀನಾರಾಯಣ ರಾವ್ ಅವರ ಪೌತ್ರಿ, ಶ್ರೀ ರಾಜಶಂಕರ ಕಳಮೆ ಹಾಗೂ ಶ್ರೀಮತಿ ರಶ್ಮಿ ಅವರ ಪುತ್ರಿ.


Phone : 0824 - 2440110, 2213946
**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)



*Prop. : P. Srikanth Rao* Mobile : 9343361618
**M/s. SAMARPAN**
*HOUSE OF STATIONERY*
"Vijaya Nivas", Opp. Pio Mall
Bejai Church Road, Mangalore - 4



*Sri Hari Adyapady*
*Proprietor*
Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE
*We undertake all types of Electrical, Plumbing and Sanitary works*



**RAJESH POWER PRESS**
1963-2026
PRINTERS & PUBLISHERS
DARBE - 574 202, PUTTUR, D. K., Karnataka
✆ : (08251) 231696 / 9448481696
Email : putturrajeshpress@gmail.com

ಪತ್ರಿಕೆಗೆ ಶುಭ ಬಯಸುವ –
**ಉದಯಾದ್ರಿ ಕೆಟರರ್ಸ್**
ಉಮಾಮಹೇಶ್ವರ ಉದಯಾದ್ರಿ ಮಠ
ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಬಳಿ
'ಅಂಗೀರಸ', ಪಡುಬಿದ್ರಿ, ಉಡುಪಿ ಜಿಲ್ಲೆ
ಪ್ರೊ: ನಯನಾಭಿರಾಮ ಸ್ವಾಮಿ
✆ : 9449101303 / 9632500864
ಮದುವೆ ಇನ್ನಿತರ ಸಮಾರಂಭಗಳಿಗೆ ಶುಚಿರುಚಿಯಾದ ಅಡುಗೆ ಮಾಡಿಕೊಡಲಾಗುವುದು.
ಶ್ರಾದ್ಧ ಮತ್ತು ಔರ್ಧ್ವದೈಹಿಕ ಕ್ರಿಯೆಗಳನ್ನು ಇತರ ವೈದಿಕ ಕಾರ್ಯಕ್ರಮಗಳನ್ನು ನಡೆಸಿಕೊಡಲಾಗುವುದು.
ಸಮಾಜ ಬಾಂಧವರು ಸದುಪಯೋಗಪಡಿಸಿಕೊಳ್ಳಬಹುದು.

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ಧೃತಿ ಮತ್ತು ಧ್ರುವ್**

# ‘ವಿದ್ಯಾರ್ಥಿವೇತನ ನಿಧಿ ಸ್ಥಾಪನೆ’



ಡಾ. ಐ. ಕೆ. ನೀಲಕಂಠನ್ ಸ್ಮರಣಾರ್ಥ, ಹತ್ತನೇ ತರಗತಿ ತನಕ ಕಲಿಯುವ ಸಮಾಜದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡಲು ಈ ನಿಧಿಯನ್ನು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಡಾ. ನೀಲಕಂಠನ್ ಅವರ ಮಗಳು ಶ್ರೀಮತಿ ಸುಪ್ರಿಯ ಚಂದ್ರಕಾಂತ್ ಇನ್ನ ಮತ್ತು ಅವರ ಅಳಿಯ ಶ್ರೀ ಇನ್ನ ಚಂದ್ರಕಾಂತ್ ರಾವ್ ಸ್ಥಾಪಿಸಿದ್ದಾರೆ. ಈ ನಿಧಿಯ ಚೆಕ್ಕನ್ನು ಡಾ. ನೀಲಕಂಠನ್ ಇವರ ಧರ್ಮಪತ್ನಿ ಶ್ರೀಮತಿ ಮನೋಹರಿ ನೀಲಕಂಠನ್ ಐ.ಕೆ. ಇವರ ಉಪಸ್ಥಿತಿಯಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದ ಪದಾಧಿಕಾರಿಗಳಿಗೆ, ಶ್ರೀ ಚಂದ್ರಕಾಂತ್ ಇವರ ನಿವಾಸದಲ್ಲಿ ನಡೆದ ಸರಳ ಸಮಾರಂಭದಲ್ಲಿ ನೀಡಲಾಯಿತು. ಈ ವಿದ್ಯಾರ್ಥಿನಿಧಿಗೆ ಪೂರಕನಿಧಿಯಾಗಿ ಅಷ್ಟೇ ಮೊತ್ತದ ಠೇವಣಿಯನ್ನು ಶ್ರೀ ಚಂದ್ರಕಾಂತ್ ಇವರ ಮಗಳು ಶ್ರೀಮತಿ ಶರಣ್ಯ ಕಾರ್ತಿಕ್ ಸಿ. ಇನ್ನ ಕೊಡುವ ಭರವಸೆಯನ್ನು ನೀಡಿದ್ದಾರೆ. ಈ ವಿದ್ಯಾರ್ಥಿನಿಧಿ ಸ್ಥಾಪಿಸಿದ ಶ್ರೀ ಇನ್ನ ಚಂದ್ರಕಾಂತ್ ರಾವ್ ಮತ್ತು ಅವರ ಕುಟುಂಬದ ಎಲ್ಲಾ ಸದಸ್ಯರಿಗೆ, ಸುಬ್ರಹ್ಮಣ್ಯ ಸಭಾ ಮಂಗಳೂರು ಅಭಿನಂದನೆಯೊಂದಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದೆ. ಅಧ್ಯಕ್ಷರು ಮತ್ತು ಆಡಳಿತ ಮಂಡಳಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ತಾ. 04–01–2026ನೇ ರವಿವಾರ ನಡೆದ ‘ಸ್ಕಾಲರ್ಸ್ ಡೇ’ ದಿನದಂದು ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ 2025–26ರ ಸಾಲಿನಲ್ಲಿ 134 ವಿದ್ಯಾರ್ಥಿಗಳಿಗೆ ಒಟ್ಟು ರೂ. 6,20,500/– ಸ್ಕಾಲರ್‌ಶಿಪ್ ವಿತರಿಸಲಾಗಿದೆ. ಇದರಲ್ಲಿ ವಿಶೇಷವಾಗಿ ವೇದ ಮತ್ತು ಸಂಸ್ಕೃತ ಕಲಿಕೆಯನ್ನು ಉತ್ತೇಜಿಸಲು ವಿದ್ಯಾರ್ಥಿವೇತನ ನೀಡಲಾಗಿದೆ. 2025–26ರ ಸಾಲಿನಲ್ಲಿ 66 ವಿದ್ಯಾರ್ಥಿಗಳಿಗೆ ರೂ. 73,50,000/– (ರೂಪ್ಯಾ ಎಪ್ಪತ್ತ ಮೂರು ಲಕ್ಷದ ಐವತ್ತು ಸಾವಿರ ರೂಪಾಯಿ) ಸಾಲ ವಿದ್ಯಾರ್ಥಿವೇತನ ನೀಡಲಾಗಿದೆ.



Freelance Makeup & Hairstyle Artistry

Swapna_rao_makeoverartistry

BRIDAL / PRE / POST WEDDING FUNCTIONS / OTHER PERSONAL EVENTS & PARTIES

Rental Jewellery / Saree Pre-pleating Service available



For Bookings and Enquiries

Swapna Vallish : 9972465209 / 7892235761

PRAVEEN KUMAR ADYAPADY

NOTARY & ADVOCATE

MANGALORE OFFICE
JANVI PLAZA, IInd FLOOR
BUNTS HOSTEL, MANGALORE

BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

We undertakes : Civil, Criminal, Motor Vehicles, A.C., D.C. Cases, Land Conversion, Registration etc.

ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ**

ಹಾಗೂ

**ಶ್ರೀಮತಿ ಆರತಿ ಶರ್ಮ**

‘ಶರ್ಮ’, ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ

ಮಂಗಳೂರು - 575 002 ✆ : 9880258216

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

‘ಶ್ರೀ ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್’ ಬಿಜೈ ರಸ್ತೆ, ಮಂಗಳೂರು - 575 003

**ಶಾಖೆಗಳು** ✆ : 9880968032 / 0824-2982095

ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ ✆ : 0824 - 2491895 / 8861155454
ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ ✆ : 08251 - 235895 / 8123659955
ಬೆಳ್ತಂಗಡಿ : ‘ಬೃಂದಾವನ’, ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು) ✆ : 08256 - 234076 / 8867269944
ಸುರತ್ಕಲ್ : ‘ಪೂವ ಆರ್ಕೇಡ್’ ✆ : 0824 - 2477895 / 9611550803
ಕಾರ್ಕಳ : ‘ಶ್ರೀ ಶಂಕರ’, ಪ್ರಸಾದ್ ಭವನ ಕಂಪೌಂಡು ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್ ✆ : 08258 - 235544 / 9980528800
ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು ✆ : 08257 - 233895 / 8147539955
ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344
ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ ✆ : 08255 - 239895 / 8147469955
ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ ✆ : 08258 - 200161 / 8147549955
ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ ✆ : 9731405917
ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ ✆ : 8792034344
ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ ✆ : 8197677575
ಪಡೀಲ್ ಪುತ್ತೂರು : ವಿಜಯಲಕ್ಷ್ಮೀ ಕಾಂಪ್ಲೆಕ್ಸ್ ✆ : 9740775967
ಕೊಕ್ರಾಡಿ : ವೃದ್ಧಿ ಕಾಂಪ್ಲೆಕ್ಸ್, ಜಂತಿಗೋಳಿ ಕ್ರಾಸ್, ಬೆಳ್ತಂಗಡಿ ✆ : 9741443470
ಕುಂಜತ್‌ಬೈಲ್ : ನಮ್ರದೀಪ್ ಕಾಂಪ್ಲೆಕ್ಸ್, ಕೋಸ್ಟಲ್ ಗಾರ್ಡ್ ಎದುರು ✆ : 9740925733
ಕೋಡಿಕ್ಕಲ್ : ಸುಗಂಧಿ ಪರ್ಲ್ಸ್, ಮೈನ್ ರೋಡ್, 7th ಕ್ರಾಸ್, ಮಂಗಳೂರು ✆ : 9945916755
ಕುಲಶೇಖರ : ಅಕಯ್ದ ಕಾಂಪ್ಲೆಕ್ಸ್, ಶಕ್ತಿನಗರ ಅಡ್ಡ ರಸ್ತೆ ಲ್ಯೂಮಿನಸ್ ಅಪಾರ್ಟ್‌ಮೆಂಟ್ ಬಳಿ, ಪದವು, ಕುಲಶೇಖರ, ಮಂಗಳೂರು ✆ : 8904801404
ಮುಲ್ಕಿ : ಮಾತಾ ರೆಸಿಡೆನ್ಸಿ, ಹಳೆಯಂಗಡಿ, ಮುಲ್ಕಿ ✆ : 9980638274
ಬೆಳ್ಮಣ್ : ದುರ್ಗಾಪ್ರಿಯ ಬಿಲ್ಡಿಂಗ್, ಪೇರಾಲ್‌ಪಾದೆ, ಬೆಳ್ಮಣ್, ಕಾರ್ಕಳ ✆ : 9187453634
ಗುರುಪುರ–ಕೈಕಂಬ : ಬಿ.ಎಸ್. ಟವರ್, ಕಿನ್ನಿಕಂಬಳ, ಗುರುಪುರ–ಕೈಕಂಬ ಮಂಗಳೂರು ✆ : 9449280184

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 394 ದಿನಗಳ ವರೆಗೆ | - | 6% |
| 13 ತಿಂಗಳು ಮೇಲ್ಪಟ್ಟು | - | 9% |
| ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**FIXED DEPOSIT**

ಠೇವಣಿಗಳ ಮೇಲೆ **9.5%**

ಹಿರಿಯ ನಾಗರಿಕರಿಗೆ 0.5% ಹೆಚ್ಚುವರಿ ಬಡ್ಡಿ

ಆಕರ್ಷಕ ಬಡ್ಡಿದರಗಳು

**ನಿಮ್ಮ ಹೂಡಿಕೆಗಳು ಕೇವಲ 88 ತಿಂಗಳಲ್ಲಿ ದ್ವಿಗುಣವಾಗುವುದು**

**ಲಕ್ಷಾಧೀಶ ಯೋಜನೆ**

**ರೂ. 1,00,000/-**

ಪ್ರತಿ ತಿಂಗಳಿಗೆ ರೂ. 1,350 ತೊಡಗಿಸಿ 60 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 2,450 ತೊಡಗಿಸಿ 36 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 3,800 ತೊಡಗಿಸಿ 24 ತಿಂಗಳಲ್ಲಿ

**ಚಿನ್ನಾಭರಣ ಸಾಲ**

ಪ್ರತಿ ಗ್ರಾಂ ಗೆ ₹ 6,800/-ರ ತನಕ

# 'ಶಿವಸದನಕ್ಕೆ ದೇಣಿಗೆ'




ಶಿವಸದನ ಹಿರಿಯ ನಾಗರಿಕರ ಹಾಗೂ ವಿಶೇಷಚೇತನರ ವಸತಿನಿಲಯ ಮುರ, ಪುತ್ತೂರು ಇಲ್ಲಿಗೆ ಮಂಗಳೂರಿನ ಕೋಟೆಕಾರು ನಿವಾಸಿ ಶ್ರೀ ಸುಬ್ರಹ್ಮಣ್ಯ ಭಟ್ ಮತ್ತು ಶ್ರೀಮತಿ ಭುವನೇಶ್ವರಿ ತಮ್ಮ ಪುತ್ರ ಶ್ರೀ ರಾಮಚಂದ್ರನ ಬ್ರಹ್ಮೋಪದೇಶ ಸಮಾರಂಭದ ಸಂದರ್ಭದಲ್ಲಿ ಶಿವಸದನಕ್ಕೆ ರೂ. 10,000/–ವನ್ನು ದೇಣಿಗೆಯಾಗಿ ನೀಡಿರುವರು.

ಈ ಸಂದರ್ಭದಲ್ಲಿ ನೀಡಿದ ದಾನಧರ್ಮವು ಬಾಲಕನಿಗೆ ಉತ್ತಮ ಸಂಸ್ಕಾರ ಮತ್ತು ಒಳ್ಳೆಯ ಭವಿಷ್ಯವನ್ನು ನೀಡಲಿ ಎಂದು ಶಿವಸದನ ಚಾರಿಟೇಬಲ್ ಟ್ರಸ್ಟ್ ಇದರ ಪರವಾಗಿ ಹಾರೈಸುತ್ತೇವೆ.

*ವರದಿ : ಶ್ರೀಮತಿ ಸುಮಂಗಲ ಪ್ರಭಾಕರ್*

## ಬಂದೆಯಾ ಬಾಳಿನ ಬೆಳಕಾಗಿ



ಅಲಂಗಾರ್ ಮೂಡುಬಿದಿರೆ **ಹೃಷಿಕೇಶ ಅಂಜಲಿ** ದಂಪತಿಗಳಿಗೆ ತಾರೀಕು 21–02–2026ನೇ ಶನಿವಾರ ಹೆಣ್ಣು ಮಗುವಿನ ಜನನವಾಗಿದೆ.













# ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಬನ್ನಾಡಿ ವಡ್ಡರ್ಸೆ ಸದಾನಂದ ರಾವ್ ಇವರ ಮಗ **ಮಂಜುನಾಥ ರಾವ್** ಇವರು (61) ತಾ. 23–2–2026ನೇ ಸೋಮವಾರ ನಿಧನರಾದರು. ಇವರು ತಂದೆ, ತಾಯಿ, ಪತ್ನಿ, ಪುತ್ರನನ್ನು ಅಗಲಿದ್ದಾರೆ.

●●●




**ಶ್ರೀ ಮಾರ್ಪಳ್ಳಿ ಲಕ್ಷ್ಮೀನಾರಾಯಣರಾಯರು** (55) ತಾರೀಕು 14–03–2026ನೇ ಶನಿವಾರ ಪೂನಾದಲ್ಲಿ ನಿಧನರಾದರು. ಇವರು ಪತ್ನಿ, ಓರ್ವ, ಮಗ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●




**ಶ್ರೀ ಅನಂತ ಪದ್ಮನಾಭ ಆಕಿರೆಕಾಡು** (53) ತಾ. 7–3–2026ನೇ ಶನಿವಾರ ಬೆಂಗಳೂರಿನಲ್ಲಿ ನಿಧನರಾದರು. ಇವರು ತಾಯಿ, ಪತ್ನಿ, ಓರ್ವ ಮಗಳನ್ನು ಅಗಲಿದ್ದಾರೆ.

●●●



ಸೂರಿಕುಮೇರು ನಿವಾಸಿ **ಶ್ರೀ ಚಂದ್ರಶೇಖರ್ ಟಿ.ಆರ್.** (78) ತಾ. 24–3–2026ನೇ ಮಂಗಳವಾರ ನಿಧನರಾದರು. ಇವರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

●●●



**ಬೆಟ್ಟಂಪಾಡಿ ವೆಂಕಟ್ ರಾವ್** (86) ತಾ. 02–03–2026ನೇ ಸೋಮವಾರ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



ಕೊರೆಗಾಂವ್‌ನ ಹೋಟೆಲ್ ಉದ್ಯಮಿ **ಕುಂಜಾರು ವಾಮನ ರಾವ್** (83) ತಾ. 12–3–2026ನೇ ಗುರುವಾರ ನಿಧನರಾದರು. ಅವರು ಪತ್ನಿ ಮತ್ತು ಪುತ್ರಿಯನ್ನು ಅಗಲಿದ್ದಾರೆ.

●●●



**ಪಂಜ ದಿವಾಕರ್ ರಾವ್** [75] ತಾ. 10–3–2026ನೇ ಮಂಗಳವಾರ ನಿಧನರಾದರು. ಅವರು ಪತ್ನಿ ಮತ್ತು ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

●●●



ಹೇರಂಜಾಲ್ ನಾಗಪ್ಪಯ್ಯ ಮೆರ್ಟ ಇವರ ಧರ್ಮಪತ್ನಿ **ಯಮುನಾ ಎನ್. ಮೆರ್ಟ** (70) ತಾ. 23–02–2026ನೇ ಸೋಮವಾರ ದೈವಾಧೀನರಾದರು. ಇವರು ಕಾಸರಗೊಡು ಕೂಡ್ಲು ಗೋಪಾಲಕೃಷ್ಣ ಶ್ಯಾನುಭೋಗ್ ಅವರ ಪುತ್ರಿ. ಇವರು ಪತಿ, ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
ಚಿಲಿಂಬಿ, ಮಂಗಳೂರು

ಪತ್ರಿಕೆಗೆ ಶುಭ ಬಯಸುವ –



**ಕೆ. ಆರ್. ಉಪಾಧ್ಯಾಯ**
**ಮಂಗಳೂರು**

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಉದಯಾಸ್ತಮಾನ ಭಜನೆ



ಶೃಂಗೇರಿ ಶಾರದಾಪೀಠದಿಂದ ಬಂದ ಆದೇಶದಂತೆ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇಲ್ಲಿ ನಡೆದ ಉದಯಾಸ್ತಮಾನ ಭಜನೆ ಕಾರ್ಯಕ್ರಮವು ಶ್ರದ್ಧಾಭಕ್ತಿಯಿಂದ ಯಶಸ್ವಿಯಾಗಿ ನೆರವೇರಿತು.

ಈ ಕಾರ್ಯಕ್ರಮವನ್ನು ಆಯೋಜಿಸಿರುವ ಸಂಚಾಲಕರಾದ ಶ್ರೀ ಕರುಣ್ ರಾವ್ ಬೆಳ್ಳೆ, ಶಿಕಾರಿಪುರ ಶ್ರೀ ಕೃಷ್ಣಮೂರ್ತಿಯವರು ಶ್ರೀ ಶ್ರೀಧರ ಶಾಸ್ತ್ರಿಗಳು, ಭಜನಾ ಗುರುಗಳಾದ ಶ್ರೀ ಪೊಳಲಿ ಸುಬ್ಬರಾವ್ ಉಪಸ್ಥಿತರಿದ್ದರು. ವಿವಿಧ ಭಜನಾ ಮಂಡಳಿಗಳಿಂದ ಶೃಂಗೇರಿ ಭಜನೆ ಹಾಗೂ ಕುಣಿತ ಭಜನೆಗಳು ನಡೆದವು.

*ವರದಿ : ಶ್ರೀಮತಿ ಸುಮಂಗಲಪ್ರಭಾಕರ್*

## 'ಭಜನಾ ಸಮರ್ಪಣೆ'




ಶಿವಸದನ ಹಿರಿಯ ನಾಗರಿಕರ ಹಾಗೂ ವಿಶೇಷಚೇತನರ ವಸತಿನಿಲಯ, ಮುರ, ಪುತ್ತೂರು ಇಲ್ಲಿ ಉತ್ತಮ ಸೇವಾಮನೋಭಾವದ ಪುತ್ತೂರು ತಾಲೂಕು ಮುಂಡೂರು ಗ್ರಾಮದ ಶ್ರೀಮತಿ ನಳಿನಿ ಲೋಕಪ್ಪ ಗೌಡ ಕರೆಮನೆ ಇವರ ಸ್ಮರಣಾರ್ಥ ವಿಶೇಷ ಸಮಾರಾಧನೆಯನ್ನು ಪ್ರಾಯೋಜಿಸಿದ್ದರು. ಈ ಪ್ರಯುಕ್ತ ವಿಖ್ಯಾತ ಮೈಸೂರು ದಸರಾ ಯುವಸಂಭ್ರಮದಲ್ಲಿ ಜನಮೆಚ್ಚುಗೆ ಪಡೆದಿರುವ ಪುತ್ತೂರಿನ ಸ್ವರಮಾಧುರ್ಯ ಸಂಗೀತ ಬಳಗದ ಬಾಲಕಲಾವಿದೆ ಸೋನಿಕಾ ಜನಾರ್ದನ ಮತ್ತು ಬಳಗದವರಿಂದ ಭಜನಾ ಕಾರ್ಯಕ್ರಮ ನಡೆಯಿತು.



## ಉಪನಯನ

ಶ್ರೀ ಸುಬ್ರಹ್ಮಣ್ಯ ಭಟ್ ಮತ್ತು ಶ್ರೀಮತಿ ಭುವನೇಶ್ವರಿ ದಂಪತಿಗಳ ಪುತ್ರ **ಚಿ| ರಾಮಚಂದ್ರ** ಇವನ ಉಪನಯನ ತಾ. 08–03–2026ನೇ ಭಾನುವಾರ 'ಶ್ರೀ ಸುಬ್ರಹ್ಮಣ್ಯ ಸದನ', ಮಂಗಳೂರು ಇಲ್ಲಿ ಗುರುಹಿರಿಯರ ಶುಭಾಶೀರ್ವಾದಗಳೊಂದಿಗೆ ನೆರವೇರಿತು.

— — — —

ಶ್ರೀಮತಿ ಪುಷ್ಪ ಹಾಗೂ ಕೀರ್ತಿಶೇಷ ಜಯರಾಮ್ ರಾವ್ ಯು. ಅವರ ಮೊಮ್ಮಗ ಮತ್ತು ಶ್ರೀಮತಿ ಅರ್ಚನ ಮತ್ತು ಶ್ರೀ ಸಂದೇಶ್ ಯು. ಅವರ ಜೇಷ್ಠಪುತ್ರ **ಚಿ| ಅದ್ವಿಕ್**ನ ಉಪನಯನ ಸಮಾರಂಭವು ತಾ. 5–3–2026ನೇ ಗುರುವಾರ ಬೆಳ್ತಂಗಡಿ 'ಸುಬ್ರಹ್ಮಣ್ಯ ಸ್ಥಾನಿಕ ಸಭಾಭವನ'ದಲ್ಲಿ ಜರಗಿತು.

## ಶುಭವಿವಾಹ

ಶ್ರೀಮತಿ ಮತ್ತು ಶ್ರೀ ಶಶಿಧರ ಹೆಬ್ಬಾರ ಇವರ ಪುತ್ರಿ **ಚಿ| ಸೌ| ವರ್ಷಾ** ಹಾಗೂ ಶ್ರೀಮತಿ ಶಶಿಕಲಾ ಮತ್ತು ಶ್ರೀ ವೆಂಕಟೇಶ ಇವರ ಪುತ್ರ **ಚಿ| ಅರ್ಜುನ್** ಇವರ ವಿವಾಹವು ತಾ. 8–3–2026ನೇ ರವಿವಾರ ಔರಾ, ಬನ್ನೇರುಘಟ್ಟ, ಬೆಂಗಳೂರಿನಲ್ಲಿ ನಡೆಯಿತು.

❖ ❖ ❖

ಶ್ರೀಮತಿ ಪ್ರತಿಮಾ ಮತ್ತು ಇನ್ನ ಶ್ರೀ ರಮಾಕಾಂತ ರಾವ್ ಇವರ ಪುತ್ರ **ಚಿ| ನಿಶಾಂತ** ಹಾಗೂ ಶ್ರೀಮತಿ ಸಾರಿಕಾ ಮತ್ತು ಶ್ರೀ ವಾಟೆ ಸುಧಾಕರ ರಾವ್ ಇವರ ಪುತ್ರಿ **ಚಿ| ಸೌ| ಮೃದುಲಾ** ಇವರ ವಿವಾಹವು ತಾ. 6–3–2026ನೇ ಶುಕ್ರವಾರ ಪುತ್ತೂರಿನ 'ಒಕ್ಕಲಿಗ ಗೌಡ ಸಮುದಾಯ ಭವನ'ದಲ್ಲಿ ನಡೆಯಿತು.



❖ ❖ ❖

ಶ್ರೀ ಪೈಕಾನ ಶ್ರೀಕಾಂತ್ ರಾವ್ ಮತ್ತು ಶ್ರೀಮತಿ ಶೈಲಜಾ ಇವರ ಸುಪುತ್ರ **ಚಿ| ಸುಹಾಸ್** ಮತ್ತು ಶ್ರೀ ರಾಜೇಶ್ ರಾವ್ ಎನ್. ಬಿ. ಮತ್ತು ಶ್ರೀಮತಿ ವಿದ್ಯಾ ಇವರ ಸುಪುತ್ರಿ **ಚಿ| ಸೌ| ವರ್ಷಿಣಿ** ಇವರ ವಿವಾಹ ಮಹೋತ್ಸವವು ದಿನಾಂಕ 12–03–2026ನೇ ಗುರುವಾರ ಮಂಗಳೂರಿನ 'ಸಂಘನಿಕೇತನ'ದಲ್ಲಿ ನೆರವೇರಿತು.

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
**ರವಿಕಿರಣ್ ಕ್ಕೊಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

ಪತ್ರಿಕೆಗೆ ಶುಭ ಬಯಸುವ–
Dr. Jayalakshmi Devi
Dr. Jaganmohan, Smt. Asha Mohan
Akarsh M. Rao
Konchadi, Mangalore - 575 008

ಪತ್ರಿಕೆಗೆ ಶುಭ ಬಯಸುವ–
**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003



**ರಾಮಾ ಆಟೋಮೊಬೈಲ್ಸ್**
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ


**PRAMOD**
**AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

**PREETHIKA AUTOMOBILES**
✆ 2493633
9845851573
*Wholesale & Retail Dealers in :*
*2 & 3 WHEELERS, SPARES & ACCESSORIES*
KARANGALPADY, MANGALORE - 575 003
*Dealers in :*
Minda Switches, M. K. Products, Swiss Auto Products, Power Coils

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001



# ಸ್ಥಾನಿಕ ಬ್ರಾಹ್ಮಣ ಜಾಗತಿಕ ಸಮಾವೇಶ - 2026 ಸಂಪನ್ನ

***ಬ್ರಾಹ್ಮಣ ಸಂಸ್ಕಾರಕ್ಕೆ ನಿಷ್ಠೆಯಿಂದ ನಡೆದುಕೊಂಡು ಬಂದವರು ಸ್ಥಾನಿಕ ಬ್ರಾಹ್ಮಣ ಸಮಾಜ. ಇತಿಹಾಸವನ್ನು ಕೆದಕಿದಾಗ ಅನಾದಿ ಕಾಲಗಳಿಂದಲೂ ಧಾರ್ಮಿಕವಾಗಿ ಗುರುತಿಸಿಕೊಂಡದ್ದು ಸ್ಥಾನಿಕ ಬ್ರಾಹ್ಮಣ ಸಮಾಜ*** **ಎಂದು ಎಡನೀರು ಶಂಕರಾಚಾರ್ಯ ಸಂಸ್ಥಾನದ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ನುಡಿದರು.**


**ಪುತ್ತೂರಿನ ಕಲ್ಲಾರೆಯಲ್ಲಿ ಎರಡು ದಿನಗಳ ಸ್ಥಾನಿಕ ಬ್ರಾಹ್ಮಣ ಜಾಗತಿಕ ಸಮಾವೇಶ – 2026ನ್ನು ಅವರು ಉದ್ಘಾಟಿಸಿ ಆಶೀರ್ವಚನ ನೀಡಿದರು.** ***ಹಿಂದೂ ಸಮಾಜದ ಬಲಿಷ್ಠತೆಗಾಗಿ ಬ್ರಾಹ್ಮಣ ಮತ್ತು ಇತರ ಸಮುದಾಯಗಳು ಒಗ್ಗೂಡುವ ಅಗತ್ಯ ಇದೆ ಎಂದರು.***




ರಾಜ್ಯ ಧಾರ್ಮಿಕ ಪರಿಷತ್ ಮಾಜಿ ಸದಸ್ಯ ಕಶೆಕೋಡಿ ಶ್ರೀ ಸೂರ್ಯನಾರಾಯಣ ಭಟ್ ಮಾತನಾಡಿ, ಬ್ರಾಹ್ಮಣ ಎಂದರೆ ಏನು ಎಂಬುದನ್ನು ಜಗತ್ತಿಗೆ ಸಾರಿದ ಪರಂಪರೆ ಸ್ಥಾನಿಕರದ್ದು ಎಂದರು.

ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷ ಶ್ರೀ ಮಂಜುನಾಥ ಹೆಬ್ಬಾರ್ ಉಡುಪಿ ಮಾತನಾಡಿದರು. ಶಾಸಕ ಶ್ರೀ ಅಶೋಕ್ ಕುಮಾರ್ ರೈ, ಪೌರಾಯುಕ್ತೆ ವಿದ್ಯಾ ಕಾಳೆ, ಕೋಟೆಕಾರು ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವ, ಬೆಂಗಳೂರು ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾದ ಮಾಜಿ ಅಧ್ಯಕ್ಷ ಶ್ರೀ ಶಿವರಾವ್ ಅಜ್ಜಾವರ, ಉದ್ಯಮಿ ಶ್ರೀ ಶ್ರೀನಾಥ್ ಹೆಬ್ಬಾರ್ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ 19 ಸಂಘಗಳ ಅಧ್ಯಕ್ಷರನ್ನು ಗೌರವಿಸಲಾಯಿತು. ಶ್ರೀ ಪ್ರಶಾಂತ ಶರ್ಮ ಮಠಂತಬೆಟ್ಟು ವೇದಘೋಷ ಪಠಿಸಿದರು. ಕೋಶಾಧಿಕಾರಿ ಶ್ರೀ ಉದಯ ಬಾರ್ಕೂರು ವಂದಿಸಿದರು. ಶ್ರೀ ರಾಧಾಕೃಷ್ಣ ರಾವ್ ಮತ್ತು ಶ್ರೀ ಬಿ. ಕೆ. ಧನಂಜಯ ರಾವ್ ನಿರೂಪಿಸಿದರು. ಬೆಳಗ್ಗೆ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಿತು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ, ಯಕ್ಷಗಾನ ಪ್ರದರ್ಶನ ನೆರವೇರಿತು.




ಕಾರ್ಯಕ್ರಮದಲ್ಲಿ ಸ್ಥಾನಿಕ ಬ್ರಾಹ್ಮಣ ಜಾಗತಿಕ ಸಮಾವೇಶದ ಸಮ್ಮೇಳನದ ಅಧ್ಯಕ್ಷರಾಗಿದ್ದ ನ್ಯಾಯವಾದಿ ಶ್ರೀ ಎನ್. ಕೆ. ಜಗನ್ನಿವಾಸ ರಾವ್ ಅವರಿಗೆ ಈ ಸಾಲಿನ 'ಸ್ಥಾನಿಕ ರತ್ನ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ರವಿವಾರ ನಡೆದ ಸಮಾರೋಪ ಸಮಾರಂಭದಲ್ಲಿ ವಿವಿಧ ವಿಚಾರಗೋಷ್ಠಿ ನಡೆಯಿತು.

**ಉಸಿರು ಇರುವ ತನಕ ಸಮಾಜಕ್ಕಾಗಿ ಹೋರಾಟ : ಎನ್. ಕೆ. ಜಗನ್ನಿವಾಸ ರಾವ್**

ಸಮ್ಮೇಳನಾಧ್ಯಕ್ಷರಾಗಿ ಸ್ಥಾನಿಕ ರತ್ನ ಪ್ರಶಸ್ತಿ ಸ್ವೀಕರಿಸಿದ ಶ್ರೀ ಎನ್.ಕೆ. ಜಗನ್ನಿವಾಸ ರಾವ್ ಮಾತನಾಡಿ ನಮ್ಮ ಸಮಸ್ಯೆಗಳಿಗೆ ಒಗ್ಗಟ್ಟಾಗಿ ಹೋರಾಡಲು ಸಂಘಟನೆ ಅವಶ್ಯಕ. ಇದರಲ್ಲಿ ಹಲವಾರು ಸಮಸ್ಯೆ ಎದುರಿಸಿ, ಯಶಸ್ಸು ಕಂಡಿದ್ದೇವೆ. ಮುಂದಿನ ಕಾರ್ಯಕ್ರಮಗಳಲ್ಲೂ ನಾನು ನಿರಂತರವಾಗಿದ್ದೇನೆ. ನನ್ನ ಉಸಿರು ಇರುವ ತನಕ ಸಮಾಜಕ್ಕಾಗಿ ಹೋರಾಟ ಮಾಡಲು ಸಿದ್ಧ. ಇದು ನನ್ನ ದೃಢ ನಿರ್ಧಾರ. ಕಷ್ಟಗಳು ಬರುವಲ್ಲಿ ನಾನೂ ಇದ್ದೇನೆ. ಜಾತಿಯ ವಿಚಾರದಲ್ಲಿ ನಾವು ಹೋರಾಟ ಮಾಡಿದ್ದೇವೆ. ನಮ್ಮ ಸಮಾಜವನ್ನು ಯಾರೂ ತುಚ್ಛವಾಗಿ ನೋಡಬಾರದು ಎನ್ನುವುದು ನನ್ನ ಉದ್ದೇಶವಾಗಿದೆ ಎಂದು ಹೇಳಿದ ಅವರು ನನ್ನ ಮೇಲಿನ ಗೌರವದಿಂದ ಪ್ರಶಸ್ತಿ ನೀಡಿ ಗೌರವಿಸಿರುವುದಕ್ಕೆ ಕೃತಜ್ಞತೆ ಸಲ್ಲಿಸಿದರು.

***ಹಿರಿಯರು ಮಾತ್ರವಲ್ಲ, ಕಿರಿಯರೂ ಭಾಗವಹಿಸಬೇಕು :*** *ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಸಂಪ್ರದಾಯದ, ಸಂಸ್ಕಾರ ಮುಂದಿನ ತಲೆಮಾರಿಗೆ ವರ್ಗಾವಣೆ ಆಗಬೇಕಾದರೆ ಮಕ್ಕಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಹಿರಿಯರ ಜವಾಬ್ದಾರಿಯಾಗಿದೆ. ಹಿರಿಯರು ಮಾತ್ರವಲ್ಲ ಕಿರಿಯರನ್ನು ಸಂಘಟನೆಯಲ್ಲಿ ಸೇರಿಸಿಕೊಳ್ಳಬೇಕು. ಎಲ್ಲಾ ಸಮಾಜಕ್ಕೆ ಅದರದ್ದೇ ಆದ ಸಂಸ್ಕಾರವಿದೆ. ನಾವೆಲ್ಲ ಹಿಂದುಗಳು ಒಂದೇ ಎಂದು ಹೇಳಿದರೂ, ಹಿರಿಯರು ಹಾಕಿಕೊಂಡ ಸಂಪ್ರದಾಯ, ಸಂಸ್ಕಾರ ಮುಂದಿನ ತಲೆಮಾರಿಗೆ ವರ್ಗಾವಣೆ ಆಗಬೇಕು. ಈ ನಿಟ್ಟಿನಲ್ಲಿ ನಮ್ಮ ಮನೆಯಲ್ಲಿರುವ ಮಕ್ಕಳು ಇಂತಹ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಹಿರಿಯರು ಅದರ ಜವಾಬ್ದಾರಿಯನ್ನು ವಹಿಸಬೇಕು. ನಂಬಿಕೆಗಳಿಂದ ಸಮುದಾಯವೇ ವಂಚಿತರಾಗುವ ಭಯವಿದೆ. ಎಲ್ಲಾ ಸಮಾಜ ಬಾಂಧವರು ಒಗ್ಗಟ್ಟಾಗಬೇಕು.*

❖ ❖ ❖

***ತಾನು ಸಂಘಟಿಸಿಕೊಂಡಾಗ ದೇಶ ಸಂಘಟಿತವಾಗುತ್ತದೆ : ವಾಗೀಶ ಶಾಸ್ತ್ರೀ***

*ಉಡುಪಿಯ ಶೃಂಗೇರಿ ಮಠದ ಧರ್ಮದರ್ಶಿ ವೇದಮೂರ್ತಿ ವಾಗೀಶ ಶಾಸ್ತ್ರೀ ಮಾತನಾಡಿ ಧರ್ಮಕ್ಕೆ ವಿರೋಧವಾಗದ ರೀತಿಯಲ್ಲಿ ಜೀವನ ನಡೆಸಿ ಅರ್ಥ, ಕಾಮ, ಮೋಕ್ಷಗಳನ್ನು ಪಡೆಯಬೇಕು. ತನ್ನನ್ನು ತಾನು ಸಂಘಟಿಸಿಕೊಂಡಾಗ ದೇಶ ಸಂಘಟಿತವಾಗುತ್ತದೆ. ಉತ್ತಮ ಗುರಿಯೊಂದಿಗೆ ತಾನು, ಸಮಾಜ, ದೇಶ ಸಂಘಟಿತವಾಗಬೇಕು. ಸ್ಥಾನಿಕ ಬ್ರಾಹ್ಮಣರ ರಕ್ಷಣೆಯ ಪ್ರಯತ್ನದಲ್ಲಿ ಸಮಾವೇಶ ನಡೆದಿದೆ. ಸಮಾವೇಶದಲ್ಲಿ ಉದ್ಘಾಟನೆ ಹಾಗೂ ಸಮಾರೋಪ ಸಮಾರಂಭದಲ್ಲಿ ದಿಕ್ಸೂಚಿ ಭಾಷಣಗಳನ್ನು ಜೋಡಿಸಿ ಕೊಂಡಿದ್ದು ಮುಂದಿನ ಸಮಾವೇಶ ಇನ್ನಷ್ಟು ಉತ್ತಮವಾಗಿ ನಡೆಯಲು ಸಹಕಾರಿಯಾಗಲಿದೆ ಎಂದರು.*

❖ ❖ ❖

***ಬ್ರಾಹ್ಮಣ ಎಂಬುದನ್ನು ಜಗತ್ತಿಗೆ ಸಾರಿದ ಪರಂಪರೆ ಸ್ಥಾನಿಕರದ್ದು – ಕಶೆಕೋಡಿ ಶ್ರೀ ಸೂರ್ಯನಾರಾಯಣ ಭಟ್***

*ರಾಜ್ಯ ಧಾರ್ಮಿಕ ಪರಿಷತ್ ಮಾಜಿ ಸದಸ್ಯರಾದ ಕಶೆಕೋಡಿ ಶ್ರೀ ಸೂರ್ಯನಾರಾಯಣ ಭಟ್ ಅವರು ಮಾತನಾಡಿ ಈಗ ಪ್ರಪಂಚದಲ್ಲಿ ವಿಜೃಂಭಿಸುವ ಮತಗಳು ಹುಟ್ಟಲು ಎಷ್ಟೋ ಸಾವಿರ ವರ್ಷಗಳ ಹಿಂದೆ ಒಂದು ಸುಸಂಸ್ಕೃತವಾದ ಜೀವನ ನಡೆಸಿ ಸಮಾಜಕ್ಕೆ ಮಾರ್ಗದರ್ಶನ ಮಾಡಿದ ಪರಂಪರೆ ಸ್ಥಾನಿಕ ಸಮಾಜದ್ದು. ಕ್ರಿ. ಪೂ. 3ರಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದಲ್ಲೇ ಸ್ಥಾನಿಕ ಬ್ರಾಹ್ಮಣರ ಉಲ್ಲೇಖವಿದೆ. ಅವತ್ತಿನಿಂದ ಆರಂಭಿಸಿ ಇವತ್ತಿನ ತನಕ ನೋಡಿದರೆ ನಮ್ಮ ಇಲ್ಲಿನ ಸುತ್ತಮುತ್ತಲಿನ ಎರಡು ಮೂರು ಜಿಲ್ಲೆಗಳಲ್ಲಿ ಸಿಕ್ಕಿರುವ ಶಿಲಾಶಾಸನ, ತಾಮ್ರದ ಫಲಕಗಳನ್ನು ಗಮನಿಸಿದರೆ ಒಂದಲ್ಲ ಒಂದು ಕಡೆಯಲ್ಲಿ ಸ್ಥಾನಿಕರ ಬಗ್ಗೆ ಉಲ್ಲೇಖವಿದೆ. ಬ್ರಾಹ್ಮಣ ಎಂದರೆ ಏನು ಎಂಬುದನ್ನು ಜಗತ್ತಿಗೆ ಸಾರಿದ ಪರಂಪರೆ ಸ್ಥಾನಿಕರದ್ದು. ಉಡುಪಿ, ದಕ್ಷಿಣ ಕನ್ನಡ, ಕಾಸರಗೋಡು ಜಿಲ್ಲೆಗೆ ಹೊರಗಿನಿಂದ ಯಾರು ಬಂದರೂ ಅವರಿಗೆ ಆಶ್ರಯ ಕೊಟ್ಟ ಮನೆತನವಿದ್ದರೆ ಅದು ಸ್ಥಾನಿಕರದ್ದು. ಈ ಕುರಿತು ಅನೇಕ ಗ್ರಂಥಗಳಿವೆ, ಅದನ್ನು ಸ್ಥಾನಿಕರು ಕಡ್ಡಾಯವಾಗಿ ಓದಬೇಕೆಂದರು.*

# ಪೊಳಲಿ ಆಯುರ್ವೇದ ಭೂಷಣ ಡಾ। ಎಂ. ವೆಂಕಟೇಶ ಶಾಸ್ತ್ರಿ ಸ್ಮಾರಕ ವೆಲ್‌ನೆಸ್ ಸೆಂಟರ್‌ನ ಶಿಲಾನ್ಯಾಸ



**ಆಧುನಿಕ ಜೀವನದಲ್ಲಿ ಆಯುರ್ವೇದ ಕ್ಷೇಮ ಕೇಂದ್ರಗಳ (Wellness Centers) ಅಗತ್ಯತೆ**

**'ಸ್ವಸ್ಥಸ್ಯ ಸ್ವಾಸ್ಥ್ಯ ರಕ್ಷಣೆ, ಆತುರಸ್ಯ ವಿಕಾರ ಪ್ರಶಮನಂ ಚ'** ಎಂಬುದು ಆಯುರ್ವೇದದ ಮೂಲ ಮಂತ್ರ. ಅಂದರೆ ಆರೋಗ್ಯವಂತ ವ್ಯಕ್ತಿಯ ಆರೋಗ್ಯವನ್ನು ಕಾಪಾಡುವುದು ಮತ್ತು ರೋಗಿಯ ಕಾಯಿಲೆಯನ್ನು ಗುಣಪಡಿಸುವುದು ಎಂದರ್ಥ. ಇಂದಿನ ಧಾವಂತದ ಜಗತ್ತಿನಲ್ಲಿ, ಮನುಷ್ಯ ಪ್ರಕೃತಿಯಿಂದ ದೂರವಾಗುತ್ತಿದ್ದಾನೆ. ಈ ಸಂದರ್ಭದಲ್ಲಿ ಆಯುರ್ವೇದ ಕೇಂದ್ರಗಳು ನಮಗೆ ಮರಳಿ ನೈಸರ್ಗಿಕ ಆರೋಗ್ಯವನ್ನು ನೀಡುವ ಸಂಜೀವಿನಿಯಾಗಿ ಕೆಲಸ ಮಾಡುತ್ತಿವೆ.

**1. ಮೂಲ ಕಾರಣದ ಚಿಕಿತ್ಸೆ :** ಆಧುನಿಕ ವೈದ್ಯಕೀಯ ಪದ್ಧತಿಯು ಹೆಚ್ಚಾಗಿ ರೋಗದ ಲಕ್ಷಣಗಳಿಗೆ ಚಿಕಿತ್ಸೆ ನೀಡುತ್ತದೆ. ಆದರೆ ಆಯುರ್ವೇದ ಕೇಂದ್ರಗಳು ರೋಗದ ಮೂಲಕಾರಣವನ್ನು ಪತ್ತೆಹಚ್ಚುತ್ತವೆ. ಪ್ರತಿಯೊಬ್ಬ ವ್ಯಕ್ತಿಯ ದೇಹದ ಪ್ರಕೃತಿ (ವಾತ, ಪಿತ್ತ, ಕಫ) ಬೇರೆ ಬೇರೆಯಾಗಿರುತ್ತದೆ. ಈ ಕೇಂದ್ರಗಳಲ್ಲಿ ತಜ್ಞ ವೈದ್ಯರು ನಾಡಿ ಪರೀಕ್ಷೆಯ ಮೂಲಕ ದೋಷಗಳನ್ನು ಗುರುತಿಸಿ, ದೇಹದ ಸಮತೋಲನವನ್ನು ಕಾಪಾಡಲು ಸಹಾಯ ಮಾಡುತ್ತಾರೆ.

**2. ಜೀವನಶೈಲಿ ಕಾಯಿಲೆಗಳ ನಿಯಂತ್ರಣ :** ಇಂದಿನ ಕಾಲದಲ್ಲಿ ಮಧುಮೇಹ (Diabetes), ರಕ್ತದೊತ್ತಡ (BP) ಮತ್ತು ಬೊಜ್ಜಿನಂತಹ ಸಮಸ್ಯೆಗಳು ಹೆಚ್ಚಾಗಿವೆ. ಇದಕ್ಕೆ ಅಸಮತೋಲಿತ ಆಹಾರ ಮತ್ತು ಕೆಲಸದ ಒತ್ತಡವೇ ಮುಖ್ಯ ಕಾರಣ. ಆಯುರ್ವೇದ ಕೇಂದ್ರಗಳಲ್ಲಿ ನೀಡಲಾಗುವ ಪಂಚಕರ್ಮ ಚಿಕಿತ್ಸೆಯು ದೇಹದಲ್ಲಿನ ಕಸವನ್ನು (ಟಾಕ್ಸಿನ್) ಹೊರಹಾಕಿ, ಅಂಗಾಂಗಗಳನ್ನು ಪುನಶ್ಚೇತನಗೊಳಿಸುತ್ತದೆ. ಇದು ದೀರ್ಘಕಾಲದ ಕಾಯಿಲೆಗಳನ್ನು ತಡೆಗಟ್ಟಲು ಅತ್ಯಂತ ಅವಶ್ಯಕವಾಗಿದೆ.

**3. ಮಾನಸಿಕ ಶಾಂತಿ ಮತ್ತು ಒತ್ತಡ ನಿರ್ವಹಣೆ :** ದೈಹಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯವೂ ಮುಖ್ಯ. ಆಯುರ್ವೇದ ಕೇಂದ್ರಗಳಲ್ಲಿ ಮಾಡುವ ಶಿರೋಧಾರ ಮತ್ತು ಅಭ್ಯಂಗ (ತೈಲ ಮಸಾಜ್) ಚಿಕಿತ್ಸೆಗಳು ನರಮಂಡಲವನ್ನು ಶಾಂತಗೊಳಿಸುತ್ತವೆ. ಇದರೊಂದಿಗೆ ಕಲಿಸುವ ಯೋಗ ಮತ್ತು ಪ್ರಾಣಾಯಾಮಗಳು ಮನಸ್ಸಿನ ಆತಂಕವನ್ನು ದೂರ ಮಾಡಿ, ನೆಮ್ಮದಿಯ ನಿದ್ರೆ ಮತ್ತು ಏಕಾಗ್ರತೆಯನ್ನು ಹೆಚ್ಚಿಸುತ್ತವೆ.

**4. ರೋಗನಿರೋಧಕ ಶಕ್ತಿ ಹೆಚ್ಚಳ :** ರೋಗ ಬಂದ ಮೇಲೆ ಚಿಕಿತ್ಸೆ ಪಡೆಯುವುದಕ್ಕಿಂತ ರೋಗ ಬರದಂತೆ ತಡೆಯುವುದು ಲೇಸು. ಆಯುರ್ವೇದವು ದಿನಚರಿ (ದೈನಂದಿನ ಕ್ರಮ) ಮತ್ತು ಋತುಚರಿ (ಋತುಮಾನಕ್ಕೆ ತಕ್ಕ ಆಹಾರ) ಬಗ್ಗೆ ತಿಳಿಸಿಕೊಡುತ್ತದೆ. ಹಳದಿ, ಅಶ್ವಗಂಧ, ಬ್ರಾಹ್ಮಿಯಂತಹ ನೈಸರ್ಗಿಕ ಗಿಡಮೂಲಿಕೆಗಳ ಬಳಕೆಯು ದೇಹದ ರೋಗನಿರೋಧಕ ಶಕ್ತಿಯನ್ನು ನೈಸರ್ಗಿಕವಾಗಿ ಹೆಚ್ಚಿಸುತ್ತದೆ.

**5. ಅಡ್ಡಪರಿಣಾಮಗಳಿಲ್ಲದ ಚಿಕಿತ್ಸೆ :** ರಾಸಾಯನಿಕ ಔಷಧಿಗಳ ಅತಿಯಾದ ಸೇವನೆಯಿಂದ ದೇಹದ ಮೇಲೆ ಅನೇಕ ಅಡ್ಡಪರಿಣಾಮಗಳಾಗುವ ಸಾಧ್ಯತೆ ಇರುತ್ತದೆ. ಆದರೆ ಆಯುರ್ವೇದವು ಸಂಪೂರ್ಣವಾಗಿ ಗಿಡಮೂಲಿಕೆಗಳು ಮತ್ತು ನೈಸರ್ಗಿಕ ತೈಲಗಳನ್ನು ಅವಲಂಬಿಸಿರುವುದರಿಂದ ಇದು ಸುರಕ್ಷಿತವಾಗಿದೆ. ಇದು ಕೇವಲ ರೋಗ ನಿವಾರಣೆಯಲ್ಲದೆ, ಒಟ್ಟಾರೆ ಜೀವನದ ಗುಣಮಟ್ಟವನ್ನು ಸುಧಾರಿಸುತ್ತದೆ.

**ಆಯುರ್ವೇದ ಕ್ಷೇಮ ಕೇಂದ್ರಗಳು ಕೇವಲ ಚಿಕಿತ್ಸಾ ಕೇಂದ್ರಗಳಲ್ಲ, ಅವು ಜೀವನದ ಸರಿಯಾದ ದಾರಿಯನ್ನು ತೋರಿಸುವ ಮಾರ್ಗದರ್ಶಿಗಳು. ಪ್ರಕೃತಿಯೊಂದಿಗೆ ಒಂದಾಗಿ ಬದುಕುವುದನ್ನು ಕಲಿಸುವ ಈ ಕೇಂದ್ರಗಳು ಇಂದಿನ ಯಾಂತ್ರಿಕ ಜೀವನದಲ್ಲಿ ಪ್ರತಿಯೊಬ್ಬರಿಗೂ ಅನಿವಾರ್ಯವಾಗಿವೆ. ನಾವು ನಮ್ಮ ಪೂರ್ವಜರು ನೀಡಿದ ಈ ಶ್ರೇಷ್ಠ ಜ್ಞಾನವನ್ನು ಅಳವಡಿಸಿಕೊಂಡರೆ ಆರೋಗ್ಯವಂತ ಸಮಾಜವನ್ನು ನಿರ್ಮಿಸಲು ಸಾಧ್ಯ.**

## ಹೊರರೋಗಿ ವಿಭಾಗ (OPD) ಮತ್ತು ಚಿಕಿತ್ಸಾ ಸೌಲಭ್ಯ

ನಮ್ಮ ವೆಲ್‌ನೆಸ್ ಸೆಂಟರ್‌ನಲ್ಲಿ ಹೊರರೋಗಿ ವಿಭಾಗದ (OPD) ಸೌಲಭ್ಯವಿದ್ದು, ಇಲ್ಲಿ ಸ್ಥಳೀಯ ನಿವಾಸಿಗಳಿಗೆ ಸಾಮಾನ್ಯ ಕಾಯಿಲೆಗಳಿಗೆ ಚಿಕಿತ್ಸೆ ಮತ್ತು ಅಪಘಾತಗಳ ಸಂದರ್ಭದಲ್ಲಿ ತುರ್ತು ಪ್ರಥಮ ಚಿಕಿತ್ಸೆ ಲಭ್ಯವಿರುತ್ತದೆ. ಈ ಉದ್ದೇಶಕ್ಕಾಗಿಯೇ ಅರ್ಹ ವೈದ್ಯಕೀಯ ವೃತ್ತಿಪರರನ್ನು ನೇಮಿಸಲಾಗುವುದು.

## ತರಬೇತಿ ಮತ್ತು ಉದ್ಯೋಗಾವಕಾಶ

ನಮ್ಮ ಕೇಂದ್ರದಲ್ಲಿ ಯಾವುದೇ ಸಮಯದಲ್ಲಿ ಸುಮಾರು 100 ವಿದ್ಯಾರ್ಥಿಗಳಿರುತ್ತಾರೆ (SSLC ಉತ್ತೀರ್ಣರಾದ ಅಥವಾ PUC ಅನುತ್ತೀರ್ಣರಾದ ಯುವಕ–ಯುವತಿಯರು). ಇವರಿಗೆ ವಿವಿಧ ಆಯುರ್ವೇದ ಪದ್ಧತಿಗಳು, ತೈಲ ಮಸಾಜ್, ಫಿಸಿಯೋಥೆರಪಿ ಮತ್ತು ವೃದ್ಧರ ಆರೈಕೆಯ ಬಗ್ಗೆ ತರಬೇತಿ ನೀಡಲಾಗುವುದು. ಇವರು ಕೇಂದ್ರದಲ್ಲೇ ವಾಸ್ತವ್ಯ ಹೂಡಿ 1ರಿಂದ 3 ವರ್ಷಗಳ ಅವಧಿಯ ತರಬೇತಿ ಪಡೆಯಲಿದ್ದಾರೆ. ತರಬೇತಿಯ ಅನಂತರ ಅವರಿಗೆ ಸೂಕ್ತ ಉದ್ಯೋಗದ ಭರವಸೆಯನ್ನು ನೀಡಲಾಗುವುದು.


## ಪುತ್ತೂರಿನಲ್ಲಿ ಸುಸಜ್ಜಿತ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ದಲ್ಲಿ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯವಿದ್ದು, ಹಿರಿಯ ನಾಗರಿಕರ ವಸತಿನಿಲಯದಲ್ಲಿ 60ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲಚೇತನರ ವಿಶೇಷ ಶಾಲೆಗೆ (Day Care) ಮಕ್ಕಳ ದಾಖಲಾತಿ ಆರಂಭವಾಗಿದೆ. ನುರಿತ ಶಿಕ್ಷಕರಿಂದ ಇವರಿಗೆ ಹಲವಾರು ಚಟುವಟಿಕೆ, ಆಟ, ಪಾಠ, ಆರೈಕೆಗಳನ್ನು ಮಿತದರದಲ್ಲಿ ಒದಗಿಸಲಾಗುತ್ತಿದೆ. 25 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಸತಿನಿಲಯದಲ್ಲಿ ಉಳಿದುಕೊಳ್ಳಲು ಹಾಗೂ ಸಣ್ಣ ಮಕ್ಕಳಿಗೆ ಬೆಳಗ್ಗೆ ಗಂಟೆ 7–00ರಿಂದ ಸಂಜೆ ಗಂಟೆ 7–00ರ ವರೆಗೆ ನೋಡಿಕೊಳ್ಳುವ (Day Care) ವ್ಯವಸ್ಥೆ ಇದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ ಮತ್ತು ನಿಮ್ಮ ಎಲ್ಲಾ whatsapp ಗ್ರೂಪ್‌ಗಳಿಗೆ ಈ ಮಾಹಿತಿ ತಲುಪಿಸಲು ವಿನಂತಿ.

**ಹೆಚ್ಚಿನ ಮಾಹಿತಿಗಾಗಿ :**

● ಶ್ರೀ ಕರುಣ್ ರಾವ್ ಬೆಳ್ಳೆ – 7337634359 ● ಶ್ರೀಮತಿ ಸುಮಂಗಲಾಪ್ರಭಾಕರ್ – 9844242442 ● ಶ್ರೀ ಪಿ. ಶ್ರೀಕಾಂತ್ ರಾವ್ – 7795116598

Anuraga Matrimony®
Exclusive Website for Brahmin Community

ಸ್ಮಾರ್ತ, ವೈಷ್ಣವ, ಶ್ರೀವೈಷ್ಣವ ಬ್ರಾಹ್ಮಣ ವಧು-ವರಾನ್ವೇಷಣೆಗಾಗಿ
www.anuragamatrimony.com ಉಚಿತ ರಿಜಿಸ್ಟ್ರೇಶನ್

GET IT ON Google Play

Sudhashree

ಅನುರಾಗ ಮ್ಯಾಟ್ರಿಮೊನಿ

✓ ಮನೆಯಲ್ಲೇ ಕುಳಿತು ವಧು–ವರಾನ್ವೇಷಣೆ ಮಾಡಲು ಒಂದು ಸುವರ್ಣಾವಕಾಶ.
✓ ಸ್ಮಾರ್ತ–ಸ್ಥಾನಿಕ ಉಪಪಂಗಡದ ವಧು–ವರರ ಪ್ರತ್ಯೇಕ ಅನ್ವೇಷಣೆ ಸಾಧ್ಯ.
✓ ಎಲ್ಲಾ ವಯಸ್ಸು, ವಿದ್ಯಾರ್ಹತೆ, ಉದ್ಯೋಗಸ್ಥ ಹಾಗೂ ವಿಚ್ಛೇದಿತ ವಧು–ವರರಿಗೂ ಸದಸ್ಯತ್ವಕ್ಕೆ ಅವಕಾಶವಿದೆ.
✓ ವಧು–ವರರ ವಿದ್ಯಾರ್ಹತೆ, ಉದ್ಯೋಗ, ವಾಸಸ್ಥಳ ಹಾಗೂ ಇನ್ನಿತರೆ ವಿವರಗಳಿಂದ ವಿಂಗಡಿಸಬಹುದು.



● ಬೆಂಗಳೂರು ● ಮೈಸೂರು ● ಉಡುಪಿ ● ಹುಬ್ಬಳ್ಳಿ

1ನೇ ಮಹಡಿ, ಕೆನರಾ ಟವರ್, ಮಿಷನ್ ಆಸ್ಪತ್ರೆ ರಸ್ತೆ

ಉಡುಪಿ ಮೊಬೈಲ್ : 8105458755

# ‘ಶಿವಸದನ’ಕ್ಕೆ ದೇಣಿಗೆ



ದಿ। ಶ್ರೀಮತಿ ಯಶೋಧಾ ಶರ್ಮ ಇವರ ಸ್ಮರಣಾರ್ಥ ಅವರ ಪತಿ ಶ್ರೀ ಎಲ್ಲೂರು ಕರುಣಾಕರ ಶರ್ಮ ಇವರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ‘ಶಿವಸದನ’ ಹಿರಿಯ ನಾಗರಿಕರ ಹಾಗೂ ವಿಶೇಷಚೇತನರ ವಸತಿ ನಿಲಯಕ್ಕೆ ರೂ. **1,00,000/-** (ರೂಪಾಯಿ ಒಂದು ಲಕ್ಷ)ವನ್ನು ದೇಣಿಗೆ ನೀಡಿರುವರು. ಇವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತ ಧನ್ಯವಾದಗಳು.





TO KNOW MORE CALL

8882 777 444

98807 42159 | 98450 84866 | 96115 31026

sales@landtrades.in | www.landtrades.in

RERA NO : PRM/KA/RERA/1257/334/PR/100822/005149

SHIVABAGH
Kadri


Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* Dr. A. P. Krishna, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3

*Editor :* Sri M. S. Raghunath Rao, Darbe, Puttur *Printed at :* Rajesh Power Press, Darbe - 574 202, Puttur, D. K.